"ನನಗೆ ಒಂದೇ ಚಿಂತೆ, ನನ್ನ ಕಾಲ ಮೇಲೆ ನಾನು ನಿಲ್ಲುವುದು ಯಾವಾಗ? ಈ ಸರ್ಕಾರದ ಹಂಗು ನನಗೆ ಬೇಕಿಲ್ಲ. ಸ್ಯಾಮ್ ಕಾಲೇಜು ಪ್ರವೇಶ ಮಾಡಿ, ಸೋಫಿ ಹೈಸ್ಕೂಲ್ ಸೇರಿದರೆ ಸಾಕು. ನಾನು ಎಲ್ಲಾದರೂ ಕೆಲಸ ಮಾಡಿ, ಸಂಜೆ ಕಾಲೇಜು ಸೇರಬಹುದು. ಕಂಪ್ಯೂಟರ್ ಅಥವಾ ಇನ್ನಾದರೂ ಓದನ್ನು ಮುಗಿಸಿ ಕೆಲಸಕ್ಕೆ ಸೇರಬಹುದು. ಆ ದಿನಗಳನ್ನು ಎದುರು ನೋಡುತ್ತಿದ್ದೇನೆ."

"ಅವೆಲ್ಲಾ ಸ್ವಲ್ಪ ಕಷ್ಟ ಅಲ್ಲವೇ?"

"ಬಹಳಾನೇ ಕಷ್ಟ. ಹಾಗೆಂದುಕೊಂಡು ಸುಮ್ಮನಿರುವುದು ಸರಿಯೇ ಹೇಳಿ. ಕಷ್ಟಗಳು ಬರುತ್ತಲೇ ಇರುತ್ತವೆ, ಧೈರ್ಯವಾಗಿ ಎದುರಿಸಬೇಕು. ಅದೇ ಅಲ್ಲವೇ ಜೀವನ ಎಂದರೆ?"

"ಆದರ್ಶ ತಾಯಿ ನೀನು, ಲೀಸಾ."

"ಅದೇ ನನ್ನ ಬಯಕೆ. ನನ್ನ ಹಾಗೆ ನನ್ನ ಮಕ್ಕಳು ಬದುಕಿನಲ್ಲಿ ಕಷ್ಟ ಪಡುವುದು ಬೇಡ. ಓದಿ ಬರೆದು ಒಳ್ಳೆಯ ಕೆಲಸ ಹುಡುಕಿಕೊಂಡು ಜೀವನದಲ್ಲಿ ಮುಂದೆ ಬರಲಿ ಎನ್ನೋದೇ ನನ್ನ ಆಸೆ."

ಡೇವಿಡ್ ಯೋಚಿಸಿ ನೋಡಿದ ನಿಜವಾಗಿ ಬದುಕಿರುವುದು ತಾನೋ ಅಥವಾ ಅವಳೋ. ಆರಾಮವಾಗಿ ಮನೆಯಲ್ಲಿ ತಿಂದು ತೇಗಿ, ಎಲ್ಲಾ ಬಗೆಯ ಸೌಕರ್ಯಗಳನ್ನೂ ಅನುಭವಿಸುತ್ತಾ ಇರುವ ತಾನು, ದಿನವೂ ಯಾವುದಾದರೂ ಸಮಸ್ಯೆಯನ್ನು ಎದುರಿಸುತ್ತಾ, ಬದುಕು ಒಂದು ಬಗೆಯ ಹೋರಾಟವಾಗಿದ್ದರೂ ಹೆಬ್ಬಯಕೆಗಳನ್ನು ಇಟ್ಟುಕೊಂಡು ಜೀವನದೊಡನೆ ಸೆಣಸಾಡುವ ಲೀಸಾ. ಅವಳ ಧೈರ್ಯಕ್ಕೆ ಕೋಡಬೇಕು. ತನ್ನದು ಒಂದು ಬಗೆಯ ದಾಸ್ಯವೇ ಅಲ್ಲವೇ?

ಅವಳ ಜೀವನವನ್ನೇ ವಸ್ತುವಾಗಿರಿಸಿಕೊಂಡು, ಅವಳು ತಿಳಿಸಿದ ಸಂಗತಿಗಳನ್ನೇ ಆಧಾರವಾಗಿಟ್ಟುಕೊಂಡು, ಅಲ್ಲಿಲ್ಲಿ ಸ್ವಲ್ಪ ಉಪ್ಪು ಖಾರ ಬೆರೆಸಿ 2,000 ಪದಗಳ ಕಥೆಯೊಂದನ್ನು ಹೆಣೆದ. "ಹೋರಾಟದ ಬದುಕು" ಎಂಬ ಹೆಸರನ್ನು ನೀಡಿ ಪತ್ರಿಕೆಗೆ ಕಳಿಸಿದ. ಸಂಪಾದಕರು ಮೆಚ್ಚಿ ಪ್ರಕಟಿಸಿದರು. ಎಲ್ಲಿಲ್ಲದ ಆನಂದ ಡೇವಿಡನಿಗೆ. ಬತ್ತಿ ಹೋಗಿದ್ದ ಚಿಲುಮೆ ಮತ್ತೆ ಉಕ್ಕಿಬಂದಿತ್ತು. ಪತ್ರಿಕೆಯನ್ನು ಕೊಂಡು ಲೀಸಾಳ ಮನೆಗೆ ಧಾವಿಸಿದ. ಓದಿದ ಅವಳು ಆಶ್ಚರ್ಯ ಪಟ್ಟಳು – ನನ್ನ ಮೇಲೆ ಕಥೆಯೇ? ನಾನು ಕಥಾನಾಯಕಿಯೇ? ನಕ್ಕಳು. ಹೆಂಡತಿ ಸೇರಾಳಿಗೂ ತೋರಿಸಿದ. ಅವಳು ಓದಿ, "ಚೆನ್ನಾಗಿದೆ. ಆದರೆ ಯಾರಿವಳು? ನಿಮಗೆ ಎಲ್ಲಿ ಸಿಕ್ಕಳು? ಏಕೆ ನನಗೆ ಈವರೆಗೂ ಹೇಳಲಿಲ್ಲ?" ಎಂದು ಕೇಳಿದಳು.

ಕಥೆ ಸಾರ್ವಜನಿಕರ ಮೆಚ್ಚಿಗೆಯನ್ನೂ ಗಳಿಸಿತು. ಹೊಗಳಿ ಪತ್ರಿಕೆಯಲ್ಲಿ ಈಮೇಲುಗಳು ಬಂದವು. ಹಿಗ್ಗಿದ ಡೇವಿಡ್. ಇದ್ದಕ್ಕಿದ್ದಂತೆಯೇ ಪ್ರಖ್ಯಾತ ಪ್ರಕಾಶನ ಸಂಸ್ಥೆಯೊಂದು ಅವನನ್ನು ಸಂಪರ್ಕಿಸಿ "ನಿಮ್ಮ ಕಥೆ ಸೊಗಸಾಗಿದೆ. ಅದನ್ನು ವಿಸ್ತರಿಸಿ ಒಂದು ಲಕ್ಷ ಪದಗಳ ಕಾದಂಬರಿಯಾಗಿ ರೂಪಿಸಲು ಸಾಧ್ಯವೇ? ಒಪ್ಪಿಗೆ ಇದ್ದರೆ ನಾವು ನಿಮಗೆ ಅಡ್ವಾನ್ಸ್ ಕೊಡಲು ಸಿದ್ಧ" ಎಂದರು. ಕುಣಿದಾಡಿದ ಡೇವಿಡ್.

ಒಪ್ಪಿಗೆ ಇತ್ತು ಬರೆಯಲು ಸಿದ್ಧನಾದ. ಲೀಸಾಳ ಬಗ್ಗೆ ಮತ್ತಷ್ಟು ಸಂಶೋಧನೆ ಮಾಡುವ ಆವಶ್ಯಕತೆ ಇತ್ತು. ಅವಳ ನಿತ್ಯಜೀವನ, ಅವಳು ಮತ್ತು ಮಕ್ಕಳ ಊಟ, ತಿಂಡಿಗಳೇನು, ನೆರೆಹೊರೆಯವರೊಂದಿಗೆ ಅವಳ ವರ್ತನೆ ಇತ್ಯಾದಿ, ಇತ್ಯಾದಿ. ಅವಳಿಗೆ ಬುದ್ಧಿವಂತ ನಿಲುವುಗಳು ಇವೆಯೇ? ಅವಳೊಡನೆ ಚರ್ಚೆಗೆ ಅಂಶಗಳನ್ನು ಪಟ್ಟಿಮಾಡಿಕೊಂಡ. ಅವಳು ಕೆಫೆಗೆ ಬಂದಾಗ ಒಂದೆರಡು ಪ್ರಶ್ನೆ ಕೇಳುತ್ತಿದ್ದ. ಆದರೆ ಅವಳು ವಾರಕ್ಕೆ ಒಮ್ಮೆಯೋ, ಎರಡು ಸಲವೋ ಬರುತ್ತಿದ್ದಳು. ಮೂರು ನಾಕು ದಿನಗಳಾದರೂ ಅವಳು ಬರದಿದ್ದರೆ ತಾನೇ ಅವಳ ಮನೆಗೆ ಹೋಗುತ್ತಿದ್ದ.